# ಕರ್ನಾಟಕ ಸರ್ಕಾರ

(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಡಿಟಿಇ/48/ಸಿಡಿಸಿ(1)2015 /3221

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ: 05/01/2016.

## ಸುತ್ತೋಲೆ

**ವಿಷಯ:-** ಅನಧಿಕೃತ ಟುಟೋರಿಯಲ್/ಕೋಚಿಂಗ್ ನಡೆಸುವವರ ಮೇಲೆ ಕರ್ನಾಟಕ ಶಿಕ್ಷಣ ಕಾಯಿದೆ 1983ರ ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ.

-----

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರುಗಳ ಗಮನಕ್ಕೆ ಈ ಕೆಳಗಿನ ವಿಷಯಗಳನ್ನು ತರಲಾಗಿದೆ.

- ಪಾಲಿಟೆಕ್ನಿಕ್ ಉಪನ್ಯಾಸಕರು/ಬೋಧಕರು/ಕಾರ್ಯಗಾರ ಸಿಬ್ಬಂದಿ/ಕಛೇರಿ ಸಿಬ್ಬಂದಿಯವರುಗಳು ಖಾಸಗಿಯಾಗಿ ಟ್ಯೂಷನ್ ನಡೆಸುವುದು ಅಥವ ಟುಟೋರಿಯಲ್ ಸಂಸ್ಥೆಳಲ್ಲಿ ಅನಧಿಕೃತವಾಗಿ ಪಾಠ ಪ್ರವಚನ, ಸಿಇಟಿ ಕೋಚಿಂಗ್ ತರಗತಿ ಮಾಡುವುದು "ಕರ್ನಾಟಕ ಶಿಕ್ಷಣ ಕಾಯಿದೆ 1983ರ ಸೆಕ್ಷನ್ 35ರ ಪ್ರಕಾರ " ಅಪರಾಧವಾಗುತ್ತದೆ. ಆದಕಾರಣ ಇದರ ಬಗ್ಗೆ ಅಧಿಕಾರಿ/ಸಿಬ್ಬಂದಿಯವರುಗಳ ಗಮನಕ್ಕೆ ತರುವಂತೆ ರಾಜ್ಯದ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.
- ಪ್ರತಿ ಪಾಲಿಟೆಕ್ನಿಕ್‌ಗಳ / ಇಂಜಿನಿಯರಿಂಗ್ ಕಾಲೇಜುಗಳ ನಿಗಧಿತ ಕಾರ್ಯ ವೇಳೆಯ ಸಮಯದಲ್ಲಿ ಎಲ್ಲಾ ಅಧಿಕಾರಿ/ಸಿಬ್ಬಂದಿವರ್ಗದವರು ಸಂಸ್ಥೆಯಲ್ಲಿ ಲಭ್ಯವಿರಬೇಕು.
- ಸಂಸ್ಥೆಯ ಹೆಚ್ಚಿನ ಕಾರ್ಯಭಾರಗಳು ಉದಾ: NBA/ICT/AICTE/CDTP/NSS/Placement/Exam related ಹಾಗೂ ಪ್ರಾಂಶುಪಾಲರ ನಿರ್ದೇಶನದಂತೆ ಸಂಸ್ಥೆಯ ಎಲ್ಲಾ ಕಾರ್ಯಗಳನ್ನು ನಿಗಧಿತ ವೇಳೆಯಲ್ಲಿ ಸರಿಯಾದ ರೀತಿಯಲ್ಲಿ ಮಾಡಬೇಕಾಗಿರುತ್ತದೆ..
- ಬೋಧಕ ಸಿಬ್ಬಂದಿಯವರು ತಮ್ಮ ಬೋಧನಾ ಕಾರ್ಯದ ಜೊತೆಗೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕೌನ್ಸಿಲಿಂಗ್ ಕಾರ್ಯವನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಲ್ಲಿ ಬೋದನಾ ಗುಣಮಟ್ಟ ಹಾಗೂ ಕೌಶಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿಗಾ ವಹಿಸಿ ಕಾರ್ಯ ನಿರ್ವಹಿಸಲು ಸೂಚಿಸಿದೆ.

ನಿರ್ದೇಶಕರು

ಇವರಿಗೆ

1. ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಎಲ್ಲಾ ಬೋಧಕ / ಬೋಧಕೇತರ ಸಿಬ್ಬಂದಿವರ್ಗದವರ ಮಾಹಿತಿಗಾಗಿ ಪ್ರಾಚಾರ್ಯರ ಮೂಲಕ:- ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
2. ಇ-ಗೌರ್ವನೆನ್ಸ್ ವಿಭಾಗ- ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.